# ಮಕ್ಕಳ ಚಲನಚಿತ್ರೋತ್ಸವ 7 ರಿಂದ

■ **ವಿಕ ಸುದ್ದಿಲೋಕ** ಬೆಂಗಳೂರು

6ನೇ ಅಂತಾರಾಷ್ಟ್ರೀಯ ಮಕ್ಕಳ ಚಲನಚಿತ್ರೋತ್ಸವ ಜ.7 ರಿಂದ 13ರವರೆಗೆ ನಗರದ ನಾನಾ ಕಡೆ ನಡೆಯಲಿದೆ.

ಜ.7ರಂದು ಬೆಳಗ್ಗೆ ಅಂಬೇಡ್ಕರ್ ಭವನದಲ್ಲಿ ಮುಖ್ಯಮಂತ್ರಿ ಡಾ. ಯಡಿಯೂರಪ್ಪ ಉದ್ಘಾಟಿಸುವರು. ಜ.8 ರಿಂದ 13ರವರೆಗೆ ಪ್ರತಿದಿನ ಬಾಲಭವನ ಹಾಗೂ ಮೂವಿಲ್ಯಾಂಡ್‌ನಲ್ಲಿ ಬೆಳಗ್ಗೆ 10, 12 ಹಾಗೂ ಮಧ್ಯಾಹ್ನ 2 ಗಂಟೆಗೆ ನಡೆಯಲಿದೆ. ನವರಂಗ್‌ನಲ್ಲಿ ಪ್ರತಿದಿನ ಬೆಳಗ್ಗೆ 9 ಗಂಟೆಗೆ ನಡೆಯಲಿದೆ ಎಂದು ಚಿಲ್ಡ್ರನ್ಸ್ ಇಂಡಿಯಾ ಅಂತಾರಾಷ್ಟ್ರೀಯ ಮಕ್ಕಳ ಮಹೋತ್ಸವದ ಅಧ್ಯಕ್ಷ ಎನ್.ಆರ್. ನಂಜುಂಡೇಗೌಡ ಪತ್ರಿಕಾಗೋಷ್ಠಿಯಲ್ಲಿ ಶನಿವಾರ ತಿಳಿಸಿದರು.

18 ದೇಶಗಳ ಚಿತ್ರಗಳು ಪ್ರದರ್ಶನಗೊಳ್ಳಲಿವೆ. ಹೀಗಾಗಿ ದೇಶ-ವಿದೇಶಗಳಿಂದ ಅನೇಕ ಕಲಾವಿದರು ಮತ್ತು ನಿರ್ಮಾಪಕ, ನಿರ್ದೇಶಕರು ಭಾಗವಹಿಸುವರು. ಅದರಲ್ಲೂ ಚೀನಾದ 11 ಚಿತ್ರಗಳ ಪ್ರದರ್ಶನವನ್ನು ಮೂವಿಲ್ಯಾಂಡ್‌ನಲ್ಲಿ 'ಚೈನಾ ಫೆಸ್ಟಿವಲ್' ಶೀರ್ಷಿಕೆಯಡಿ ಪ್ರದರ್ಶನಗೊಳ್ಳುವುದು. ಉತ್ಸವದಲ್ಲಿ 37 ವಿದೇಶಿ, 10 ಭಾರತೀಯ ಚಿತ್ರಗಳು (ಅದರಲ್ಲಿ 'ಬೆಟ್ಟದಪುರದ ದಿಟ್ಟ ಮಕ್ಕಳು' ಕನ್ನಡ ಚಿತ್ರ) ಹಾಗೂ 13 ಪರಿಸರ ಚಿತ್ರಗಳು ಪ್ರದರ್ಶನಗೊಳ್ಳಲಿವೆ. ಜ.11ರಿಂದ ಬೆಳಗಾವಿ, ಹುಬ್ಬಳ್ಳಿ, ಮೈಸೂರು, ಮಂಡ್ಯಗಳಲ್ಲೂ ಚಲನಚಿತ್ರ ಉತ್ಸವಗಳು ನಡೆಯಲಿವೆ ಎಂದರು.

ಜ.8 ಮತ್ತು 9ರಂದು ಬೆಳಗ್ಗೆ 9 ರಿಂದ ಸಂಜೆ 4ರವರೆಗೆ ಯವನಿಕಾದಲ್ಲಿ ಮಕ್ಕಳಿಗಾಗಿ ಉಚಿತ ಅನಿಮೇಷನ್ ಕಾರ್ಯಾಗಾರ ಏರ್ಪಡಿಸಲಾಗಿದೆ. 9 ರಿಂದ 13ರವರೆಗೆ ಪ್ರತಿದಿನ ಮಧ್ಯಾಹ್ನ 12 ಗಂಟೆಗೆ ಪರಿಸರ ಚಿತ್ರಗಳ ಪ್ರದರ್ಶನವಿದೆ. ಜ.10ರಂದು 'ಮಕ್ಕಳ ಚಲನಚಿತ್ರ ಆಂದೋಲನ' ಹಾಗೂ ಜ.11ರಂದು 'ಪರಿಸರ ಪ್ರಜ್ಞೆ ಮೂಡಿಸುವಲ್ಲಿ ಮಾಧ್ಯಮಗಳ ಪಾತ್ರ' ಕುರಿತು ಯವನಿಕಾದಲ್ಲಿ ವಿಚಾರ ಸಂಕಿರಣ ನಡೆಯಲಿದೆ.

ಜ.13ರಂದು ಮಧ್ಯಾಹ್ನ 3 ಗಂಟೆಗೆ ಬಾಲಭವನದಲ್ಲಿ ಸಮಾರೋಪ ನಡೆಯಲಿದೆ. ಅಂದು ವಿದೇಶಿ ಗಣ್ಯರನ್ನು ಸನ್ಮಾನಿಸಲಾಗುವುದು. ಈ ಚಿತ್ರೋತ್ಸವಕ್ಕೆ ನಟ ಉಪೇಂದ್ರ ರಾಯಭಾರಿಯಾಗಿರುತ್ತಾರೆ. ಎಲ್ಲ ಪ್ರದರ್ಶನಗಳಿಗೂ ಪ್ರವೇಶ ಉಚಿತ ಎಂದು ಅವರು ತಿಳಿಸಿದರು. ಮಾಹಿತಿಗೆ ಮೊಬೈಲ್: 94480 86161.